# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 319

ಸದಸ್ಯರ ಹೆಸರು : ಡಾ. ಚಂದ್ರಶೇಖರ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 03.02.2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಂದಾಯ ಇಲಾಖೆಯಲ್ಲಿ ಎಷ್ಟು ಜನ ಗ್ರಾಮ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ; ಅವರೆಲ್ಲರೂ ಖಾಯಂ ಗೊಂಡಿದ್ದಾರೆಯೇ; | ಕಂದಾಯ ಇಲಾಖೆಯಲ್ಲಿ ಒಟ್ಟು- 9782 ಗ್ರಾಮ ಸಹಾಯಕರುಗಳು ಮಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರು ಖಾಯಂಗೊಂಡಿರುವುದಿಲ್ಲ. |
| (ಆ) | ಕಂದಾಯ ಗ್ರಾಮ ಸಹಾಯಕರ ಖಾಯಂಮಾತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಗ್ರಾಮ ಸಹಾಯಕರು ಮಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸದರಿಯವರಿಗೆ ಮಾಸಿಕ ಮಿತವೇತನವನ್ನು ಕಾಲಕಾಲಕ್ಕೆ ಹೆಚ್ಚಳ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಬಿಎಸ್‌ಐ 2011, ದಿನಾಂಕ:26.3.2018ರಲ್ಲಿ ದಿನಾಂಕ:1.4.2018ರಿಂದ ಅನ್ವಯವಾಗುವಂತೆ ಮಾಸಿಕ ಮಿತವೇತನವನ್ನು ರೂ.10,000/- ದಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.<br>ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:4559-4562/1998ರಲ್ಲಿ ದಿನಾಂಕ: 06.11.2003 ರಂದು ನೀಡಿರುವ ತೀರ್ಪಿನ ಅನುಸಾರ ಗ್ರಾಮ ಸಹಾಯಕರ ಸೇವೆಯನ್ನು ಸಕ್ರಮೀಕರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ. |

ಸಂಖ್ಯೆ: ಕಂಇ 22 ಬಿಎಸ್‌ಐ 2021

(ಆರ್. ಅಶೋಕ)

ಕಂದಾಯ ಸಚಿವರು